**ದಿನಾಂಕಃ 18-03-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಂ ಎಂ ಎಂ ವಕೀಲರಿಂದಃ**

1. ರೆಹಮನ್ ಸಾಬ್ ರಾಣೇಬೆನ್ನೂರು ಅವರು ನನಗೆ ಅಜ್ಜನಾಗಬೇಕು. ಅಬ್ದುಲ್ ರೌಫ್ ಅವರು ನನ್ನ ತಂದೆ. ಅಬ್ದುಲ್ ಅಜೀಮ್ ಅವರು ನನ್ನ ದೊಡ್ಡಪ್ಪ . ದಾವಾ ಆಸ್ತಿ ರಿ.ಸ. ನಂಃ 883/ಬಿ ಇದು ನನ್ನ ತಂದೆ ಅಬ್ದುಲ್ ರೌಫ್ ಹಾಗೂ ನನ್ನ ದೊಡ್ಡಪ್ಪ ಅಬ್ದುಲ್ ಅಜೀಮ್ ಅವರಿಗೆ ಸಂಬಂಧ ಪಟ್ಟ ಆಸ್ತಿ ಎಂದರೆ ನಿಜ. ಸದರಿ ಆಸ್ತಿಯನ್ನು ಬಶೀರ್ ಅಹಮ್ಮದ್‌ನ ಹೆಸರಿನಲ್ಲಿ ಅವರಿಬ್ಬರೂ ಖರೀದಿಸಿದ್ದರು. ಸದರಿ ಆಸ್ತಿಯನ್ನು ಮಾರಾಟ ಮಾಡಲು ಬಶೀರ್ ಅಹಮ್ಮದ್ ನಿಗೆ ಅಧಿಕಾರ ಇರಲಿಲ್ಲ. ದಾವಾ ಆಸ್ತಿಯಲ್ಲಿ ನನ್ನ ತಂದೆಗೆ ಹಾಗೂ ದೊಡ್ಡಪ್ಪ ಅಬ್ದುಲ್ ಅಜೀಮ್ ಅವರಿಗೆ ಸಮಾನ ಹಕ್ಕು ಇತ್ತು ಎಂದರೆ ನಿಜ. ಅದರ ಪ್ರಕಾರ ಅಬ್ದುಲ್ ಅಜೀಮ್ ನ ಅರ್ಧ ಹಿಸ್ಸೆ 1 ನೇ ಪ್ರತಿವಾದಿಗೆ ಹೋಗಬೇಕು ಎಂದರೆ ನಿಜ.

**ಪಾಟೀ ಸವಾಲುಃ 2 ಮತ್ತು 8 ನೇ ಪ್ರತಿವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.